ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹೊಸದುರ್ಗ

**ಓ ಎಸ್ .27/2021**

| | | |
|---|---|---|
| ಸಾಕ್ಷಿದಾರರ ಹೆಸರು : | ಡಿ.ಪಿ ಜಯಣ್ಣ | ಪ್ರಮಾಣ ವಚನ ಬೋಧಿಸಿದ ದಿನಾಂಕ: 05.06.2025 |
| ತಂದೆಯ ಹೆಸರು : | ಪಾಪಣ್ಣ | |
| ವಯಸ್ಸು : | 55 ವರ್ಷ | ಪಿ.ಡಬ್ಲ್ಯೂ-02 |
| ಉದ್ಯೋಗ | ಸರ್ವೇ ಸುಪ್ರವೈಸರ್ | |
| ವಾಸ ಸ್ಥಳ : | ಚನ್ನಗಿರಿ | |

**-:ಮುಖ್ಯ ವಿಚಾರಣೆ : ವಾದಿಗಳ ಪರ ಶ್ರೀ ಹೆಚ್ ಎನ್ ಎಂ ವಕೀಲರಿಂದ :-**

1. ನಾನು ಹೊಸದುರ್ಗ ತಾಲ್ಲೂಕಿನಲ್ಲಿ 2010 ರಿಂದ 2024 ರವರಗೆ ಸರ್ಕಾರಿ ಭೂಮಾಪಕರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ. ಈ ಕೇಸಿನಲ್ಲಿ ಸಾಕ್ಷಿ ಹೇಳಲು ನ್ಯಾಯಾಲಯದಿಂದ ನನಗೆ ಸಮನ್ಸ್ ಬಂದಿರುತ್ತದೆ. ಹೊಸದುರ್ಗದಲ್ಲಿ ನಾನು ಕೆಲಸ ಮಾಡುವಾಗ ಹೊಸದುರ್ಗ ತಾಲ್ಲೂಕ ಮಾಡದಕೆರೆ ಹೋಬಳಿ, ಜಾನಕಲ್ ಗ್ರಾಮದ ಸರ್ವೇ ನಂಬರ್ 111/2 ಕ್ಕೆ ಸಂಬಂಧಿಸಿದಂತೆ ಹದ್ದುಬಸ್ತು ನಿಗದಿಮಾಡಲು ಟಿ. ಜಯಣ್ಣ, ಟಿ. ನೇಮಪ್ಪ ಮತ್ತು ಟಿ. ನಾಗೇಂದ್ರಪ್ಪ ಇವರಿಂದ 2017 ರಲ್ಲಿ ಅರ್ಜಿ ಬಂದಿತ್ತು. ಸದರಿ ಅರ್ಜಿ ಬಂದ ನಂತರ ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಹೊಸದುರ್ಗ ಇವರಲ್ಲಿ ಸರ್ವೇ ನಂಬರ್ 111/2 ಮತ್ತು ಅದರ ಅಕ್ಕಪಕ್ಕದ ಜಮೀನಗಳ ದಾಖಲೆಗಳನ್ನು ತೆಗೆದುಕೊಂಡಿರುತ್ತೇನೆ. ಅರ್ಜಿದಾರರು ಮತ್ತು ಅಕ್ಕಪಕ್ಕದವರಿಗೆ ನಾವು ಸ್ಥಳಕ್ಕೆ ಬರುತ್ತೇವೆ ಎಂದು 21.11.2017 ರಂದು ನೋಟೀಸ್ ಕೊಟ್ಟಿರುತ್ತೇನೆ. ದಿಃ 28.11.2017 ರಂದು ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳದಲ್ಲಿ ಟಿ. ಜಯಣ್ಣ, ಟಿ. ನೇಮಪ್ಪ ಮತ್ತು ಟಿ. ನಾಗೇಂದ್ರಪ್ಪ ಇದ್ದರು. ಗ್ರಾಮಸ್ಥರು ಹನುಮಂತಪ್ಪ, ತಿಮ್ಮಪ್ಪ , ಕೆ . ಮಂಜುನಾಥ, ಇದ್ದರು. ಪಕ್ಕದ ಜಮೀನು ಸರ್ವೇ ನಂಬರ್ 112 ರ ಮಾಲಕ ದೇವರ ಸಿದ್ದಪ್ಪ ಬಿನ್ ನಿಂಗಪ್ಪ ಇವರು ಹಾಜರಿದ್ದರು. ದಾಖಲೆಗಳ ಆಧಾರದ ಮೇಲೆ ಸರ್ವೇ ಮಾಡಿ, ಅಳತೆ ಮಾಡಿ ಸರ್ವೇ ನಂಬರ್ 111/2 ರ ಚೆಕ್ ಬಂದಿಯನ್ನು ನಿಗದಿಪಡಿಸಿರುತ್ತೇವೆ. ಆ ಸಮಯದಲ್ಲಿ ಟಿ. ಜಯಣ್ಣ, ಟಿ. ನೇಮಪ್ಪ ಮತ್ತು ಟಿ. ನಾಗೇಂದ್ರಪ್ಪ ಹಾಗೂ ಗ್ರಾಮಸ್ಥರಾದ ಹನುಮಂತಪ್ಪ, ತಿಮ್ಮಪ್ಪ , ಕೆ . ಮಂಜುನಾಥ ಇವರ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ. ದೇವರ ಸಿದ್ದಪ್ಪ ಎನ್ನುವರು ನಾನು ಸಹಿ ಮಾಡುವುದಿಲ್ಲವೆಂದು ಹೋಗಿರುತ್ತಾನೆ. ಸ್ಥಳದಲ್ಲಿ ಕಚ್ಚಾನಕಾಶೆಯನ್ನು ತಯಾರಿ ಮಾಡಿಕೊಂಡು ಕಛೇರಿಗೆ ಬಂದು ನಕ್ಷೆಯನ್ನು ತಯಾರಿಸಿ ಕಛೇರಿಗೆ ಕೊಟ್ಟಿರುತ್ತೇನೆ. ಅಳತೆಯ ಕಾಲದಲ್ಲಿ ಸರ್ವೇ ನಂಬರ್ 111/2 ಒಟ್ಟು

ವಿಸ್ತೀರ್ಣ 6 ಎಕರೆ 30 ಗುಂಟೆಯಲ್ಲಿ 1 ಎಕರೆ 15 ಗುಂಟೆ ಒತ್ತುವರಿಯಾಗಿರುವುದು ಕಂಡು ಬಂದಿರುತ್ತದೆ. ಸರ್ವೇ ನಂಬರ್ 112 ರ ಹಿಡುವಳಿದಾರರು ಸದರಿ 1 ಎಕರೆ 15 ಗುಂಟೆಯನ್ನು ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ. ಸರ್ವೇ ನಂಬರ್ 111/2 ರಲ್ಲಿ ಪಶ್ಚಿಮ ಭಾಗದಲ್ಲಿ ಒತ್ತುವರಿ ಆಗಿರುತ್ತದೆ. ಸಾಕ್ಷಿಗೆ ವಾದಿಗಳ ಪರ ವಕೀಲರು ಸ್ಕೆಚ್ ನ್ನು ತೋರಿಸಲಾಗಿ, ಸಾಕ್ಷಿಯು ಸದರಿ ಸ್ಕೆಚ್ ನ್ನು ನೋಡಿ ನಾನೇ ತಯಾರು ಮಾಡಿರುತ್ತೇನೆ ಎಂದು ಹೇಳಿದ್ದು, ಸದರಿ ಸ್ಕೆಚ್ ನ್ನು ಈಗಾಗಲೇ ನಿಪಿಃ 14 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ **1,3** ರಿಂದ **7** ನೇ ಪ್ರತಿವಾದಿಗಳ ಪರಃಶ್ರೀ ಡಿ ಎನ್ ಎಂ ವಕೀಲರಿಂದಃ</u>

ಟಿ. ಜಯಣ್ಣ, ಟಿ ನೇಮಪ್ಪ ಮತ್ತು ನಾಗೇಂದ್ರಪ್ಪ ಇವರು ಅರ್ಜಿ ಕೊಟ್ಟ ದಿನಾಂಕವನ್ನು ಹೇಳಲು ಆಗುವುದಿಲ್ಲ. ನಿಪಿಃ 15 ರ ಪ್ರಕಾರ ಟಿ.ಜಯಣ್ಣ ಒಬ್ಬರೇ ಅರ್ಜಿಯನ್ನು ಕೊಟ್ಟಿರುತ್ತಾರೆ. ಅಕ್ಕಪಕ್ಕದ ಜಮೀನಿನ ಮಾಲಕರಿಗೆ ನೋಟೀಸನ್ನು ನಮ್ಮ ಕಛೇರಿಯ ಜವಾನರ ಮೂಲಕ ಕಳುಹಿಸಿರುತ್ತೇನೆ. ಅಕ್ಕಪಕ್ಕದ ಜಮೀನಿನವರಾದ ಹೆಚ್.ಡಿ ರುದ್ರಪ್ಪ, ಗವಿಸಿದ್ದಪ್ಪ, ದೇವರ ಸಿದ್ದಪ್ಪ, ರಾಮಪ್ಪ ಇವರಿಗೆ ನೋಟೀಸನ್ನು ಕೊಟ್ಟಿರುತ್ತೇನೆ. ಅವರು ನೋಟೀಸನ್ನು ತೆಗೆದುಕೊಂಡ ಕುರಿತು ನಮ್ಮ ಕಛೇರಿಯಲ್ಲಿ ದಾಖಲೆ ಇರುತ್ತದೆ. ಅಕ್ಕಪಕ್ಕದ ಜಮೀನಿನವರಾದ ಹೆಚ್.ಡಿ ರುದ್ರಪ್ಪ, ಗವಿಸಿದ್ದಪ್ಪ, ದೇವರ ಸಿದ್ದಪ್ಪ, ರಾಮಪ್ಪ ಇವರು ಸರ್ವೇ ನಂ. 111/2 ರ ಜಮೀನಿನ ಯಾವ ದಿಕ್ಕಿಗೆ ಜಮೀನು ಹೊಂದಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ನಾನು ಹದ್ದುಬಸ್ತಿಗೆ ಹೋಗುವ ಪೂರ್ವದಲ್ಲಿ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ್ಥಳಕ್ಕೆ ಹೋಗುವಾಗ ಟಿಪ್ಪಣಿ ಕಾಫಿ, ಆರ್ ಆರ್ ಪಕ್ಕಾ ಪುಸ್ತಕ, ಅಟ್ಲಾಸ್, ಆಕಾರ ಬಂದ್ ತೆಗೆದುಕೊಂಡು ಹೋಗಿರುತ್ತೇನೆ. ಸರ್ವೇ ನಂ. 111/2 ಮೂಲತಃ ಯಾರಿಂದ ಬಂದಿದೆ ಎಂದು ತಿಳಿದುಕೊಂಡಿಲ್ಲ. ಸದರಿ ಜಮೀನು ಹೇಗೆ ಬಂದಿತ್ತು ಎಂದು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರಲಿಲ್ಲ ಎಂದು ಹೇಳುತ್ತಾರೆ. ಸರ್ವೇ ನಂ 111 ರ ಸಂಪೂರ್ಣ ವಿಸ್ತೀರ್ಣ ಎಷ್ಟು ಎಂದು ಈಗ ಹೇಳಲು ಆಗುವುದಿಲ್ಲ. ಪ್ರತಿವಾದಿಗಳು ಯಾವ ಸರ್ವೇ ನಂ ಜಮೀನಿನಲ್ಲಿ ಬರುತ್ತಾರೆ ಎಂದು ಹೇಳಲು ಆಗುವುದಿಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಲಗತ್ತಾಗಿ ರಾಜಕಾಲುವೆ ಇರುತ್ತದೆ ಎಂದರೆ ಸಾಕ್ಷಿ 7-8 ವರ್ಷ ಆಗಿದ್ದರಿಂದ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಲಗತ್ತಾಗಿ ಪೂರ್ವ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿ 7-8 ವರ್ಷ ಆಗಿದ್ದರಿಂದ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಿಪಿಃ 14 ರಲ್ಲಿ ಯಾರು ಒತ್ತುವರಿ ಮಾಡಿರುತ್ತಾರೆ ಎಂದು ಹೇಳಿಲ್ಲ ಎಂದರೆ ಸಾಕ್ಷಿ ಅದನ್ನು ಪ್ರಿಂಟ್ ತೆಗೆಯುವಾಗ ಬಿಟ್ಟು ಹೋಗಿರುತ್ತದೆ ಎಂದು ಹೇಳುತ್ತಾರೆ. ಸರ್ವೇ ನಂಬರ್ 112 ಎಷ್ಟು ಜನರು ಇರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಸ್ಥಳದಲ್ಲಿ ನಾನು ಯಾರದೇ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಅಳತೆ ಮಾಡಿದಾಗ ಒಂದು ಎಕರೆ 15 ಗುಂಟೆ ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿಃ 04 ರಂತೆ ರಾಜಪ್ಪ, ಈಶ್ವರಪ್ಪ ಮತ್ತು ದೇವರಸಿದ್ದಪ್ಪ ಇವರು ಸರ್ವೇ ನಂ. 111 ರಲ್ಲಿ ಇರುತ್ತಾರೆ ಎಂದರೆ ಸಾಕ್ಷಿ 111 ರಲ್ಲಿ ಇದ್ದು 112 ರಲ್ಲಿ ಇರಬಹುದು ಎಂದು ಹೇಳುತ್ತಾರೆ. ಸರ್ವೇ ನಂ. 112 ರಲ್ಲಿ ಯಾರು ಇರುತ್ತಾರೆ ಎಂದು ದಾಖಲೆಯನ್ನು ತೆಗೆದುಕೊಂಡು ಹೋಗಿ ನಾನು ನೋಡಿಲ್ಲ. ಸರ್ವೇ ನಂ. 111/2 ರ ಪೂರ್ವಕ್ಕೆ ಸರ್ವೇ 338 ಇರುತ್ತದೆ. ಪಶ್ಚಿಮಕ್ಕೆ 112 ಇರುತ್ತದೆ. ಉತ್ತರಕ್ಕೆ 111/1 ಮತ್ತು 377 ಇರುತ್ತದೆ. ದಕ್ಷಿಣಕ್ಕೆ 336 ಜಮೀನು ಇರುತ್ತದೆ. ಸರ್ವೇ ನಂಬರ್ 111/2 ರ ಉತ್ತರಕ್ಕೆ 111/1 ಬರುತ್ತದೆ. ಸರ್ವೇ ನಂಬರ್ 111 ರಲ್ಲಿ ಒಂದು ಮತ್ತು

ಎರಡು ಪೋಡ್ ನ್ನು ಬಿಟ್ಟು ಬೇರೆ ಪೋಡುಗಳು ನಾನು ಅಳತೆ ಮಾಡುವಾಗ ಆಗಿರಲಿಲ್ಲ. ನಾನು ಸ್ಥಳಕ್ಕೆ ಹೋಗಿ ಅಳತೆ ಮಾಡಿ ಹದ್ದುಬಸ್ತು ಮಾಡಿದೇ ಇದ್ದರೂ ಸಹ ವಾದಿಗಳಿಗೆ ಅನುಕೂಲ ಅಗಲಿ ಎಂದು ಸುಳ್ಳು ನಕಾಶೆಯನ್ನು ತಯಾರಿಸಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ **9** ನೇ ಪ್ರತಿವಾದಿಯ ಪರಃ ಶ್ರೀ ಸಿ.ಬಿ. ವಕೀಲರಿಂದಃ</u>

ಸರ್ವೇ ನಂಬರ್ 111 ರ ಎಲ್ಲಾ ದಾಖಲೆಗಳನ್ನು ನಮ್ಮ ಇಲಾಖೆಯಿಂದ ತೆಗೆದುಕೊಂಡು ಹೋಗಿದ್ದೆನು. ಸರ್ವೇ ನಂಬರ್ 111 ಎರಡು ಪೋಡುಗಳು ಮಾತ್ರ ಆಗಿರುತ್ತದೆ. ಸರ್ವೇ ನಂಬರ್ 111/2 ರಲ್ಲಿ 6 ಎಕರೆ 38 ಗುಂಟೆ ಇರುತ್ತದೆ. ಸರ್ವೇ ನಂಬರ್ 111/1 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಹೇಳಲು ಆಗುವುದಿಲ್ಲ. ಮೂಲ ಸರ್ವೇ ನಂಬರ್ ನ ವಿಸ್ತೀರ್ಣವನ್ನು ನಿಗಧಿ ಮಾಡದೆ ಹಿಸ್ಸಾ ನಂಬರ್ ಗಳನ್ನು ನಿಗಧಿ ಮಾಡಲು ಆಗುವುದಿಲ್ಲ ಎನ್ನುವುದು ನಿಜ. ಸರ್ವೇ ನಂಬರ್ 111 ರ ಸುತ್ತಲು ಬಾಂದ್ ಕಲ್ಲುಗಳು ಇರುತ್ತವೆ ಎನ್ನುವುದು ನಿಜ. ಆ ಬಾಂದ್ ಕಲ್ಲುಗಳ ಆಧಾರದ ಮೇಲೆ ಹಿಸ್ಸಾ ನಂಬರ್ ಗಳನ್ನು ವಿಂಘಡನೆ ಮಾಡುತ್ತದೆ ಎನ್ನುವುದು ನಿಜ. ಸರ್ವೇ ನಂಬರ್ 111 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇರುತ್ತದೆ ಎಂದು ಈಗ ಹೇಳಲು ಆಗುವುದಿಲ್ಲ. ಸರ್ವೇ ನಂಬರ್ 111 ಮೊದಲು ಸರ್ಕಾರದ ಈಚಲು ವನ ಎನ್ನುವುದು ಗೊತ್ತಿರುವುದಿಲ್ಲ. ಈ ಸರ್ವೇ ನಂಬರ್ ನಲ್ಲಿ ನಮ್ಮ ಇಲಾಖೆಯ ನಿವೃತ್ತ ನೌಕರ ರುದ್ರಪ್ಪ ಎನ್ನುವವರಿಗೆ 9 ಚಿಲ್ಲರೆ ಎಕರೆ ಮಂಜೂರಾಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಾನು ಸ್ಥಳಕ್ಕೆ 2017 ರಲ್ಲಿ ಹೋಗಿರುತ್ತೇನೆ. ಸ್ಥಳಕ್ಕೆ ಹೋಗುವಾಗ ಸರ್ವೇ ನಂಬರ್ 111/2 ರ ಚಾಲ್ತಿ ಪಹಣಿಯನ್ನು ತೆಗೆದುಕೊಂಡು ಹೋಗಿರುತ್ತೇನೆ. ಸರ್ವೇ ನಂಬರ್ 111/2 ಅಕ್ಕಪಕ್ಕದ ಜಮೀನುಗಳನ್ನು ಅಳತೆ ಮಾಡಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ಸರ್ವೇ ನಂಬರ್ 111/2 ಖರೀದಿ ಪತ್ರವನ್ನು ನಾನು ನೋಡಿಲ್ಲ. ಖರೀದಿ ಆಗುವ ಮೊದಲು ಅಥವಾ ಖರೀದಿಯ ನಂತರ ಪೋಡ್ ಆಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಸರ್ವೇ ನಂಬರ್ 111/2 ವಿಸ್ತೀರ್ಣ 6 ಎಕರೆ 38 ಗುಂಟೆಗೆ ವಾದಿಗಳಿಗೆ ಹಕ್ಕು ಇಲ್ಲ ಮತ್ತು ಅವರು ಮಾಲಕರು ಅಲ್ಲ ಎಂದರೆ ಸರಿಯಲ್ಲ. ಪೂರ್ವಕ್ಕೆ ತಿಮ್ಮಾಬೋವಿ, ಪಶ್ಚಿಮಕ್ಕೆ- ಪ್ರತಿವಾದಿ 1 ರಿಂದ 7 ನೇ ಪ್ರತಿವಾದಿಗಳ ಜಮೀನು, ಉತ್ತರಕ್ಕೆ-ಆರುಬೆರಳು ತಿಮ್ಮಾಬೋವಿಯ ಜಮೀನು, ದಕ್ಷಿಣಕ್ಕೆ-ಇದೇ ತಿಮ್ಮಾಬೋವಿಯ ಜಮೀನಿನ ಮದ್ಯೆ ಇರುವ ಆಸ್ತಿಯನ್ನು ವಾದಿಗಳ ಖರೀದಿ ಮಾಡಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ನಾನು ಅಳತೆ ಮಾಡಲು ಹೋದ ಜಮೀನು ಚೌಕಾಕಾರವಾಗಿ ಇತ್ತು ಎನ್ನುವುದು ನಿಜ. ಸರ್ವೇ ನಂಬರ್ 111/2 ರ ಪಶ್ಚಿಮ ದಿಕ್ಕಿಗೆ ವಾಯುವ್ಯ ಮೂಲೆಯಲ್ಲಿ ಕಲ್ಯಾಣಿ ಇರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ವಾದಿಯ ಜಮೀನು ಹಾಗೂ ಕಲ್ಯಾಣಿಯ ಮದ್ಯೆ ಉತ್ತರ-ದಕ್ಷಿಣವಾದಿ ಕಂಸಾಗರದಿಂದ ದಾವಾ ಆಸ್ತಿಗೆ ಹೋಗುವ ಬಂಡಿ ದಾರಿ ಇರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಬಂಡಿದಾರಿಯ ಪಶ್ಚಿಮಕ್ಕೆ ಹಳ್ಳ ಇರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಕಲ್ಯಾಣಿಯ ಪಶ್ಚಿಮಕ್ಕೆ ಬೀರಲಿಂಗೇಶ್ವರ ದೇವಸ್ಥಾನ ಇರುತ್ತದೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ಸದರಿ ಬೀರಲಿಂಗೇಶ್ವರ ದೇವಸ್ಥಾನ ಇವರು 1 ಎಕರೆ 17 ಗುಂಟೆ 9 ನೇ ಪ್ರತಿವಾದಿಗೆ ಸೇರಿದ್ದು ಎನ್ನುವುದು ಗೊತ್ತಿರುವುದಿಲ್ಲ. ಸದರಿ 1 ಎಕರೆ 17 ಗುಂಟೆಯ ಜಮೀನಿನ ಪೂರ್ವ ಮತ್ತು ಉತ್ತರ ಭಾಗಕ್ಕೆ ಎಲ್ ಆಕಾರದಲ್ಲಿ 10 ಅಡಿ ಎತ್ತರದ ಕಾಂಪೌಂಡ್ ಗೋಡೆ ಇರುತ್ತದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ 1 ಎಕರೆ 17 ಗುಂಟೆಯ ಪಶ್ಚಿಮ ಹಾಗೂ ದಕ್ಷಿಣಕ್ಕೆ 20 ವರ್ಷಗಳ ಹಿಂದೆಯೇ ತಂತಿ ಬೇಲಿಯನ್ನು ಹಾಕಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ನಿಪಿಃ 14 ರಲ್ಲಿ ದೇವಸ್ಥಾನ, ತಿಂತಿ ಬೇಲಿ, ಕಲ್ಯಾಣಿ ಇರುವುದನ್ನು ಬರೆದಿದ್ದೀರಾ ಎಂದರೆ ಸಾಕ್ಷಿ ಅದರ ಅವಶ್ಯಕತೆ ಇರುವುದಿಲ್ಲ ಎಂದು ಹೇಳುತ್ತಾರೆ. ಸರ್ವೇ ನಂ. 111/2 ರ ಪಶ್ಚಿಮ ದಿಕ್ಕಿನಲ್ಲಿ ಒತ್ತುವರಿ

ಆಗಿರುತ್ತದೆ. ಒತ್ತುವರಿ ಮಾಡಿದೆ ಎಂದು ಹೇಳುವ ಜಮೀನಿನಲ್ಲಿ ಹಾಗೂ ಅದರ ಪಶ್ಚಿಮಕ್ಕೆ 30 ವರ್ಷದ ಫಲ ಬಿಡುವ ತೆಂಗಿನ ಗಿಡಗಳು ಇರುತ್ತವೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ನ್ಯಾಯಾಲಯದಿಂದ ಸಾಕ್ಷಿ ಹೇಳಲು ಸಮನ್ಸ್ ಬಂದ ನಂತರ ಯಾವ ಕಾರಣಕ್ಕೆ ಸಾಕ್ಷಿ ಹೇಳಲು ಹೋಗುತ್ತಿದ್ದೇನೆ ಎಂದು ವಿಚಾರ ಮಾಡಿಕೊಂಡು ಬಂದಿರುತ್ತೇನೆ. ಆ ರೀತಿ ಸಾಕ್ಷಿ ಹೇಳಲು ಬರುವ ಪೂರ್ವದಲ್ಲಿ ಪೂರ್ಣ ಮಾಹಿತಿಯನ್ನು ತಿಳಿದುಕೊಂಡು ಸಾಕ್ಷಿ ಹೇಳುವುದು ನಮ್ಮ ಕರ್ತವ್ಯ ಎನ್ನುವುದು ನಿಜ. ಅಳತೆ ಮಾಡಿಕೊಂಡ ಬಂದ ನಂತರ ಕಛೇರಿಯಲ್ಲಿ ದಾಖಲೆಗಳನ್ನು ತಯಾರು ಮಾಡಿರುತ್ತೇನೆ. ಸ್ಥಳದಲ್ಲಿ ನಾನು ಕಚ್ಚಾ ತಯಾರು ಮಾಡಿರುವುದು ಈಗ ನ್ಯಾಯಾಲಯದಲ್ಲಿ ಇರುವುದಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ವಾದಿಯರ ಆಮಿಷಕ್ಕೆ ಒಳಗಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ಪರಿಶೀಲನೆ ಮಾಡಿಲ್ಲ ಎಲ್ಲಿ ಏನು ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿಗೆ ಪೂರಕವಾದ ದಾಖಲೆ ಇಲ್ಲದ ಕಾರಣ ಅದು ಅಸಮಂಜಸವಾದ ಸಾಕ್ಷಿ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.